**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ.** ಸಿ.ಸಿ ನಂ. 2230–2022.

ಪಿರ್ಯಾದುದಾರರುಃ– ದಿ ಭಟ್ಕಳ ಎಗ್ರಿಕಲ್ಚರ್ ಎಂಡ್ ರೂರಲ್ ಡೆವಲಪ್ ಮೆಂಟ್ ಬ್ಯಾಂಕ್, ಲಿ., ಪ್ರತಿನಿಧಿಸುವವರು ಮ್ಯಾನೇಜರ್ ,
ಭಟ್ಕಳ , ಶಾಖೆ– ಹೊನ್ನಾವರ,
ತಾಲ್ಲೂಕುಃ– ಹೊನ್ನಾವರ, ಉತ್ತರ ಕನ್ನಡ.

**– ವಿರುದ್ಧ –**

ಆರೋಪಿಯ ಹೆಸರುಃ– ಗೌರಿ ಕೋಂ ಗಜಾನನ ಅಂಬಿಗ,
ಸಾಕೀನಃ– ತನ್ಮಡಗಿ, ಸುರಕಟ್ಟಾ, ಪೋಸ್ಟ್ಃ– ಮುಗ್ವಾ,
ತಾಲ್ಲೂಕುಃ– ಹೊನ್ನಾವರ , ಉತ್ತರ ಕನ್ನಡ.

********

## ಆಪಾದನೆ

ಶ್ರೀ ಈರಣ್ಣ ಹುಣಶಿಕಟ್ಟಿ, ಬಿಕಾಂ. ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡ ಆಪಾದನೆ ಹೊರಿಸುತ್ತಿದ್ದೇನೆ.

ಆರೋಪಿಯಾದ ನೀವು, ಪಿರ್ಯಾದಿಯ ಬ್ಯಾಂಕ್ ನಿಂದ ಸಾಲವನ್ನು ಪಡೆದಿದ್ದು, ಸದರಿ ಸಾಲದ ಹಣದ ಮರುಪಾವತಿಗಾಗಿ ನಿಮ್ಮ ಬ್ಯಾಂಕ್ ಖಾತೆಯುಳ್ಳ, **ಕರ್ನಾಟಕ ಬ್ಯಾಂಕ್ ಲಿ., ಹೊನ್ನಾವರ ಶಾಖೆ**ಯ ಚೆಕ್ ನಂ. 487386, ನೇದನ್ನು ದಿನಾಂಕಃ 12–07–2022 ರಂದು ರೂ. 67,170/– (ರೂ. ಅರವತ್ತೇಳು ಸಾವಿರದ ಒಂದು ನೂರಾ ಎಪ್ಪತ್ತು ರೂಪಾಯಿ ಮಾತ್ರ) ಕ್ಕೆ ಬರೆದು ಸಹಿ ಮಾಡಿಕೊಟ್ಟಿದ್ದು, ಸದರಿ ಚೆಕ್ ಬ್ಯಾಂಕ್ ಗೆ ಹಾಕಿದ ಕೂಡಲೇ ಹಣ ಸಿಗುತ್ತದೆ ಎಂದು ಭರವಸೆ ನೀಡಿದ್ದು, ಅದರಂತೆ ಪಿರ್ಯಾದಿಯವರು ಅವರ ಬ್ಯಾಂಕ್ ಖಾತೆಯಿರುವ **ಕೆನರಾ ಜಿಲ್ಲಾ ಕೇಂದ್ರ ಕೋ–ಆಪ್ ಬ್ಯಾಂಕ್ ಲಿ., ಶಿರಸಿ, (ಕೆ.ಡಿ.ಸಿ.ಸಿ.) ಹೊನ್ನಾವರ** ಶಾಖೆಯಲ್ಲಿ ಹಾಜರುಪಡಿಸಿದಾಗ, ಸದರಿ **ಕೆ.ಡಿ.ಸಿ.ಸಿ.** ಬ್ಯಾಂಕ್ ನವರು Kindly Contact Drawer/Drawee Bank and Pleasen ಎಂದು ತಿಳಿಸಿ, ಸದರಿ ಚೆಕ್ ನ್ನು ದಿನಾಂಕಃ 19–

07-2022 ರಂದು ಒಂದು ಮೆಮೋದೊಂದಿಗೆ ವಾಪಸ್ ಮಾಡಿರುತ್ತಾರೆ. ಈ ಕುರಿತು ಪಿರ್ಯಾದಿಯವರು ನಿಮಗೆ ಅವರ ವಕೀಲರ ಮೂಲಕ ದಿನಾಂಕಃ 28-07-2022 ರಂದು ಒಂದು ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸ್ ದಿನಾಂಕಃ 02-08-2022 ರಂದು ನಿಮಗೆ ಜಾರಿಯಾಗಿದ್ದರೂ ಸಹ ನೀವು ಚೆಕ್ ನಲ್ಲಿ ನಮೂದಿಸಿದ ಹಣವನ್ನು ಕೊಡದೇ ನೆಗೋಶಿಯೇಬಲ್ ಇನ್ ಸ್ಟ್ರುಮೆಂಟ್ ಕಾಯಿದೆ ಕಲಂ. 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆ1: ಈಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೆ ?

ಆರೋಪಿಯ ಉತ್ತರ : ತಿಳಿಯಿತು.

ಪ್ರಶ್ನೆ2: ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

ಆರೋಪಿಯ ಉತ್ತರ : ವಿಚಾರಣೆಯಾಗಬೇಕು.

(ಈ ಮೂಲಕ ಪ್ರಮಾಣಿಸುವುದೇನೆಂದರೆ ಆರೋಪಿಯು ಕೊಟ್ಟಂತ ಹೇಳಿಕೆಯ ಉತ್ತರವನ್ನು ಪಡೆಯಲಾಗಿದೆ )

ಸಹಿ ಇದೆ.

**ದಿನಾಂಕಃ 25-07-2023.**

(ಈರಣ್ಣ ಹುಣಶಿಕಟ್ಟಿ).,
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ.,ಹೊನ್ನಾವರ.

ಆರೋಪಿಯ ಸಹಿ

ಸಹಿ ಇದೆ.

********